ಸಂಖ್ಯೆ: ಎಲ್‌ಆರ್‌ಎಫ್ 284:87-88.

ವಿಭಾಗಾಧಿಕಾರಿಗಳ ಕಛೇರಿ,
ಮೈಸೂರು ವಿಭಾಗ,
ಮೈಸೂರು, ದಿನಾಂಕ 2-11-1987.

## ಸುತ್ತೋಲೆ.

ದಿನಾಂಕ 29-10-1987ರಂದು ಮಾನ್ಯ ಕಂದಾಯ ಆಯುಕ್ತರು ಮತ್ತು ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ವಿಭಾಗಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ಸಭೆಯಲ್ಲಿ ಭೂಸುಧಾರಣಾ ಕಾಯಿದೆಯಡಿ ಪ್ರಕರಣಗಳ ಇತ್ಯರ್ಥದಲ್ಲಿ ಸಾಧಿಸಿದ ಪ್ರಗತಿಯನ್ನು ವಿಮರ್ಶಿಸುತ್ತಾ, ಸರ್ಕಾರ ನಿರೀಕ್ಷಿಸಿದ ಮಟ್ಟದಲ್ಲಿ ಪ್ರಗತಿ ಸಾಧಿಸದಿರುವ ಬಗ್ಗೆ ತೀವ್ರ ಅತೃಪ್ತಿಯನ್ನು ವ್ಯಕ್ತಪಡಿಸಿ, ಬಾಕಿ ಉಳಿದಿರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸುವ ಸಲುವಾಗಿ, ಭೂನ್ಯಾಯ ಮಂಡಳಿಯ ಎಲ್ಲಾ ಅಧ್ಯಕ್ಷರು ಮುಂಬರುವ ಮಾಹೆಗಳಲ್ಲಿ ಕನಿಷ್ಠ 5 ಸಭೆಗಳಿಗೆ ಕಡಿಮೆಯಿಲ್ಲದಂತೆ, ಕಡ್ಡಾಯವಾಗಿ ಸಭೆಗಳನ್ನು ನಡೆಸಿ ವಿಧಿ 48-ಎ ರಡಿ ಬಾಕಿಯಿರುವ ಪ್ರಕರಣಗಳನ್ನು ಪ್ರತಿ ಮಾಹೆ ಶೇಕಡಾ 10ಕ್ಕೆ ಕಡಿಮೆಯಿಲ್ಲದಂತೆ ಇತ್ಯರ್ಥಗೊಳಿಸಲು ಸೂಚಿಸಿದೆ, ಹಾಗೂ ಇತರೆ ವಿಧಿಗಳಡಿ ಬಾಕಿಯಿರುವ ಪ್ರಕರಣಗಳನ್ನೂ ಸಹ ಸರ್ಕಾರ ನಿಗದಿಪಡಿಸಿದ ಗುರಿಯಂತೆ ಪ್ರತಿ ಮಾಹೆ ಪ್ರಗತಿ ಸಾಧಿಸಲು ಸೂಚಿಸಿದೆ. ನಿಗದಿಪಡಿಸಿದ ಗುರಿಯಂತೆ ಸಭೆಗಳನ್ನು ನಡೆಸಲು ಹಾಗೂ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ವಿಫಲರಾದ ಭೂನ್ಯಾಯ ಮಂಡಳಿಯ ಅಧ್ಯಕ್ಷರ ಬಗ್ಗೆ ತೀವ್ರವಾಗಿ ಪರಿಗಣಿಸಲಾಗುವುದು.

(ಸಹಿ)
ವಿಭಾಗಾಧಿಕಾರಿಗಳ ಪರವಾಗಿ,
ಮೈಸೂರು ವಿಭಾಗ, ಮೈಸೂರು.

1) ಪ್ರತಿಯನ್ನು ಮೈಸೂರು ವಿಭಾಗದ ಎಲ್ಲಾ ಭೂನ್ಯಾಯ ಮಂಡಳಿಯ ಅಧ್ಯಕ್ಷರು: ಹಾಗೂ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಾದ ಕ್ರಮಕ್ಕಾಗಿ ರವಾನಿಸಿದೆ.

2) ಪ್ರತಿಯನ್ನು ಕಂದಾಯ ಆಯುಕ್ತರು ಮತ್ತು ಕಾರ್ಯದರ್ಶಿಗಳು, ಕಂದಾಯ ಇಲಾಖೆ, 3ನೇ ಹಂತ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಅವಗಾಹನೆಗಾಗಿ ರವಾನಿಸಿದೆ.

ವಿಭಾಗಾಧಿಕಾರಿಗಳ ಪರವಾಗಿ,
ಮೈಸೂರು ವಿಭಾಗ, ಮೈಸೂರು.

ನಜ)